ಸಾಧ್ವಿ! ಈ ಸಂತಳ ಜೀವನದ ಹೆಚ್ಚಿನ ವಿವರಗಳಿಗಾಗಿ ಶ್ರೀಯುತ ಶೈಲೇಂದ್ರ ಸಕ್ಸೇನಾರವರ 'ಕಡಲತಡಿಯಿಂದ ಹಿಮ ಗಿರಿಯ ತನಕ' (ಕನ್ನಡಾನುವಾದ ಡಾ. ಜಿ. ಭಾಸ್ಕರ್ ಮಯ್ಯ) ಪುಸ್ತಕವನ್ನು ಆಸಕ್ತ ಸಾಧಕರು ಓದಬಹುದು. ೨೦೨೧ರ ಇಸವಿಯ ಫೆಬ್ರವರಿ ನಾಲ್ಕನೇ ತಾರೀಖು ಇಹಲೋಕ ಯಾತ್ರೆಯನ್ನು ಮುಗಿಸಿದ 'ತಪೋವನೀ ಮಾ' ರವರ ದರ್ಶನ ಸೌಭಾಗ್ಯವು ಒಂದು ವರ್ಷಕ್ಕೆ ಹಿಂದೆಯೇ ಹರಿದ್ವಾರದಲ್ಲಿ ನನಗೆ ದೊರಕಿತ್ತು. ಇಲ್ಲಿ ಈಗ ಆ ಸಮಾಧಿಯ ಮುಂದೆ ತಲೆಬಾಗಿ ನಿಂತ ನನ್ನ ಮನದಲ್ಲಿ ಆ ದಿನಗಳ ಸವಿನೆನಪುಗಳ ಸುರುಳಿ ತಾನಾಗಿ ತೆರೆದುಕೊಂಡಿತು.

ನಾವು ಉಳಿದುಕೊಂಡ ಸ್ಥಳದಿಂದ 'ನಾಲ್ಕುಧಾಮ'ಗಳಲ್ಲಿ ಒಂದಾದ ಗಂಗೋತ್ರಿ ಧಾಮ ಕೇವಲ ನಾಲ್ಕೈದು ಗಂಟೆಗಳ ಪಯಣದ ಹಾದಿಯಲ್ಲಿದೆ ಹಾಗೂ ಅಲ್ಲಿಂದ ಮೇಲೆ ಮೂರು ಕಿಲೋಮೀಟರ್ ದೂರದ ನಿರ್ಜನ ಪ್ರದೇಶದಲ್ಲಿ ಲಲಿತಾ ಮಾತಾಜಿ ಎಂಬ ತಪಸ್ವಿನಿಯೊಬ್ಬರು ಗುಹೆಯಲ್ಲಿ ಏಕಾಂತವಾಗಿ ಸಾಧನೆ ಮಾಡಿಕೊಂಡಿರುವರು ಎಂಬುದಾಗಿ ತಿಳಿಯಿತು. ಈ ವಿಚಾರ ತಿಳಿದಾಗಿನಿಂದಲೂ ಗಂಗಾಮಾತೆಯ ಹಾಗೂ ಆ ತಪಸ್ವಿನಿಯ ದರ್ಶನಕ್ಕಾಗಿ ಹೃದಯ ಚಡಪಡಿಸತೊಡಗಿತು. ಆದರೆ ಆ ತಪಸ್ವಿನಿಯ ದರ್ಶನವೇನೂ ಸುಲಭದ ಮಾತಾಗಿರಲಿಲ್ಲ, ಹಲವು ಅಡ್ಡಿ ಆತಂಕಗಳಿದ್ದವು. ಮೊದಲನೆಯದಾಗಿ, ಗಂಗಾಮಾತೆಯ ಮಂದಿರ ಚಳಿಗಾಲದಲ್ಲಿ ತೆಗೆಯದ ಕಾರಣ ನಿತ್ಯವೂ ಗಂಗೋತ್ರಿ ಧಾಮಕ್ಕೆ ವಾಹನ ಸೌಕರ್ಯವಿರಲಿಲ್ಲ. ಏಕೆಂದರೆ ಯಾತ್ರಿಕರಾರೂ ಇರುವುದಿಲ್ಲ.

ಎರಡನೆಯದಾಗಿ, ಗಂಗೋತ್ರಿಯಿಂದ ಮೇಲೆ ಹೋಗಲು ಅರಣ್ಯ ಇಲಾಖೆಯ ಅನುಮತಿಯನ್ನು ಮೊದಲೇ ಪಡೆಯಬೇಕಿತ್ತು. ಮೂರನೆಯದಾಗಿ, ಆ ತಪಸ್ವಿನಿಯ ಬಳಿ ಮೊಬೈಲ್ ಇಲ್ಲದ ಕಾರಣ ಅವರ ಒಪ್ಪಿಗೆ ಪಡೆಯುವುದೆಂತು? 'ಅಘಟಿತ ಘಟನಾ ಪಟೀಯಸೀ ಮಹಾಮಾಯಾ' ಎಂದಿದ್ದಾರಲ್ಲವೆ ಶ್ರೀ ಶಂಕರರು? ಅಸಾಧ್ಯವಾದುದ್ದನ್ನು ಸುಸಾಧ್ಯವಾಗಿಸಬಲ್ಲ ಚಾತುರ್ಯವು ಆ ತಾಯಿಗೆ ಮಾತ್ರ ಸಾಧ್ಯವೆಂದು ಎಲ್ಲವನ್ನೂ ಆಕೆಯ ಚರಣಗಳಿಗೆ ಅರ್ಪಿಸಿ ನಿಶ್ಚಿಂತರಾದೆವು.

ಕೂಡಲೇ ಈ ಅಡ್ಡಿ-ಆತಂಕಗಳು ನಿವಾರಣೆಯಾಗಿ ಹೊರಡಲು ನಿಗದಿತವಾದ ದಿನದಂದು ಆನಂದದಿಂದ ವಾಹನಕ್ಕಾಗಿ ಕಾಯುತ್ತಾ ಕುಳಿತೆವು. ಆದರೆ ಆ ದಿನ ಜೀಪು ಭರ್ತಿಯಾಗುವಷ್ಟು ಯಾತ್ರಿಕರು ಸಿಕ್ಕರೆಂಬ ಸಂಭ್ರಮದಲ್ಲಿ, ನಮಗಿತ್ತ ವಚನವನ್ನು ಮರೆತ ಚಾಲಕ ನಮ್ಮನ್ನು ಬಿಟ್ಟು ಹೊರಟೇ ಹೋದನು. ನಿರಾಸೆಗೆ ಕಿಂಚಿತ್ತೂ ಅನುವು ಮಾಡದೆ ಶರಣಾಗತಿಯೊಂದೇ ದಾರಿಯೆಂದು ನಿರಾಳರಾಗಿಬಿಟ್ಟೆವು. ಆದರೆ ತಾಯಿ ಕೃಪೆಯಿಂದ ಮರುದಿನ ಅದೇ ಚಾಲಕ ನಮ್ಮನ್ನು ಕರೆದೊಯ್ಯಲು ಬಂದನು. ನಾಲ್ಕು ತಾಸುಗಳ ಪಯಣದ ನಂತರ ಗಂಗೋತ್ರಿಧಾಮ ತಲುಪಿ, ನಮಗಾಗಿ ಕಾಯುತ್ತಿದ್ದ ಪೋರ್ಟರ್ (ಕೂಲಿಯಾಳು) ನೊಡನೆ ಆ ತಪಸ್ವಿನಿ ಮಾತಾಜಿಯವರ ದರ್ಶನಕ್ಕೆ ಹೊರಟೆವು. ನನ್ನ ಮನವು ಗೌರವಮಿಶ್ರಿತ ಭಯ, ಆತಂಕ ಹಾಗೂ ಕಾತರತೆಗಳಿಂದ ತುಂಬಿತ್ತು. ಅರ್ಧ ದಾರಿಯಲ್ಲೇ ಇದಿರಾದ ಆ ತಪಸ್ವಿನಿ ಮಾತಾಜಿಯವರನ್ನು ಕಂಡು ಆಶ್ಚರ್ಯ, ಆನಂದಗಳೆರಡನ್ನೂ ಒಟ್ಟಿಗೆ ಅನುಭವಿಸಿದೆ. ಒಂದು ಕ್ಷಣ ಮಾತೇ ಹೊರಡದೆ ಮನಸ್ಸು ಸ್ತಬ್ಧವಾಯಿತು. ಪ್ರಥಮ ನೋಟಕ್ಕೆ ಅವರ ತಪಶ್ಶಕ್ತಿಯೆಲ್ಲಾ ಪವಿತ್ರತೆಯ ರೂಪ ತಾಳಿ ಅವರ ಮೊಗದಲ್ಲಿ ಪ್ರತಿಬಿಂಬಿಸುತ್ತಿದೆಯೇನೋ ಅನಿಸಿತು. ಮಗುವಿನ ಸರಳತೆ ಹಾಗೂ ಮುಗ್ಧತೆಯಿಂದ ಕೂಡಿದ ಅವರ ಮಂದಹಾಸ ಯಾರನ್ನಾದರೂ ಸೆಳೆಯುವಂತಿತ್ತು. ಸ್ವಚ್ಛ ಕನ್ನಡದಲ್ಲಿ ಮಾತನಾಡುತ್ತಾ, ಎಷ್ಟೋ ವರ್ಷಗಳ ಪರಿಚಯಸ್ಥರೋ ಎಂಬಂತೆ ಆತ್ಮೀಯತೆ ತೋರುತ್ತಾ ಗುಹೆಗೆ ಕರೆದೊಯ್ದರು. ಮಾತಾಜಿಯವರು ಚಳಿಗಾಲದಲ್ಲಿ ಗಂಗೋತ್ರಿಯ ಗುಹೆಯೊಂದರಲ್ಲಿ ವಾಸವಿದ್ದು ಹಿಂದಿನ ದಿನವಷ್ಟೇ ತಮ್ಮ ವಾಸಸ್ಥಾನವಾದ ಈ ಗುಹೆಗೆ ಸ್ಥಳಾಂತರಗೊಂಡಿದ್ದರೆಂಬುದು ಇಲ್ಲಿಗೆ ಬಂದ ಮೇಲೆ ತಿಳಿಯಿತು. ನಾವು ನಿನ್ನೆಯೇ ಬಂದಿದ್ದರೆ ಅವರನ್ನು ಖಂಡಿತವಾಗಿ ತೊಂದರೆಗೀಡು ಮಾಡುತ್ತಿದ್ದೆವು. ನಾವು ಬಾರದಿದ್ದುದು ಒಳ್ಳೆಯದೇ ಆಯಿತು. ದೈವ ಕೃಪೆಯಿಂದಲೋ ಏನೋ, ಚಾಲಕನ ಮರೆವು ನಮಗೆ ವರವಾಗಿ ಪರಿಣಮಿಸಿತು.

ಹಿಮಾಲಯದಲ್ಲಿ ಅನೇಕ ಗುಹೆಗಳಿವೆ, ಅವುಗಳಲ್ಲಿ ಜನರ ದೃಷ್ಟಿಗೆ ಗೋಚರವಾಗದಂತೆ ಸಾಧುಸಂತರು ಸಾಧನೆ ಮಾಡಿಕೊಂಡಿರುವರೆಂದು ತಿಳಿದಿತ್ತು. ೧೯೯೨ನೇ ಇಸವಿಯಲ್ಲಿ ಪ್ರಥಮ ಬಾರಿ ಹಿಮಾಲಯಕ್ಕೆ ಭೇಟಿ ನೀಡಿದಾಗ ಇಂತಹ ಒಬ್ಬರ ದರ್ಶನವಾದರೂ ಆದೀತೆ ಎಂದು ಹುಡುಕಾಡಿದ್ದೆ. ಆ ನಮ್ಮ ಗುಪ್ತ ಆಸೆ ಇಂದು ಈ ರೀತಿ ಪೂರೈಸಿತು! ಭಗವಂತ ನಮ್ಮ ಯೋಗ್ಯತೆಗೆ ಮೀರಿ ನೀಡುವನಂತೆ. ನಾನು ಕೇವಲ ದರ್ಶನಕ್ಕಾಗಿ ಆಶಿಸಿದರೆ, ಸಂತರೊಡನೆ ವಾಸ ಮಾಡುವ ಅವಕಾಶವನ್ನೇ ದಯಪಾಲಿಸಿದ. ಗುಹಾವಾಸಿ ತಪಸ್ವಿಗಳೊಡನೆ ಹೇಗೆ ನಡೆದುಕೊಳ್ಳಬೇಕು, ಹೇಗೆ ಮಾತನಾಡಬೇಕು, ಹೇಗಿರಬೇಕು ಎಂಬ ನಮ್ಮ ಅಳುಕನ್ನು ಅವರು ತಮ್ಮ ಆತ್ಮೀಯತೆಯಿಂದ ತಕ್ಷಣವೇ ಹೊರದೂಡಿದರು.

ಇಬ್ಬರು, ಮೂವರು ಮಾತ್ರ ವಾಸಮಾಡಲು ಯೋಗ್ಯ ಸ್ಥಳಾವಕಾಶ. ಬಗಲಲ್ಲಿ ಒಂದು ಪುಟ್ಟ ಕೊಠಡಿಯಂತಿರುವ ಸ್ಥಳದಲ್ಲಿ ಅಡುಗೆ ಸಾಮಾನುಗಳನ್ನು ಇಟ್ಟಿದ್ದರು. ಸುತ್ತ ಹಸಿರು ಕಾಡು, ಕೆಳಗೆ ಪ್ರಪಾತದಲ್ಲಿ ಹರಿಯುತ್ತಿದ್ದ ಭಾಗೀರಥಿಯ ಕಲರವ ಮತ್ತು ಎದುರಿಗೆ ಹಿಮಚ್ಛಾದಿತ ಹಿಮಶಿಖರಗಳು.

ಅವರು ನಮಗೆ ಲಘು ಉಪಹಾರವಿತ್ತ ನಂತರ ಎಲ್ಲರೂ ಒಟ್ಟುಗೂಡಿ ಶ್ರೀರಾಮಕೃಷ್ಣರ ಆರಾತ್ರಿಕ ಭಜನೆಗಳನ್ನು ಹಾಡಿ

ದೆವು. ಶ್ರೀರಾಮಕೃಷ್ಣ ಮಹಾಸಂಘದಿಂದ ಮಂತ್ರದೀಕ್ಷೆ ಪಡೆದ ಮಾತಾಜಿಯವರು ಗುಹೆಯಲ್ಲಿ ದಿವ್ಯತ್ರಯರ ಭಾವಚಿತ್ರಗಳು ಹಾಗೂ ಅವರು ಗುರುಗಳಾದ, ರಾಮಕೃಷ್ಣ ಮಹಾಸಂಘದ ಹತ್ತನೆಯ ಪರಮಾಧ್ಯಕ್ಷರಾದ ಪೂಜನೀಯ ಸ್ವಾಮಿ ವೀರೇಶ್ವರಾನಂದರ ಭಾವಚಿತ್ರವನ್ನ ಇಟ್ಟಿರುವುದನ್ನು ಕಂಡು ಮನದಲ್ಲೇ ಹಿರಿಹಿರಿ ಹಿಗ್ಗಿದೆ. ಅಲ್ಲದೆ ನಾವಿಬ್ಬರೂ ಗುರುಭಗಿನಿಯರು ಎಂದು ತಿಳಿದು ನನ್ನ ಸಂತೋಷ ಮತ್ತಷ್ಟು ಹೆಚ್ಚಿತು. ಭಜನೆಯ ನಂತರ ಜಪ, ಧ್ಯಾನ. ಪ್ರಯಾಣದ ಆಯಾಸ ಹಾಗೂ ಆ ಕೊರೆಯುವ ಚಳಿಯ ಮಧ್ಯೆಯೂ ಗಾಢ ಧ್ಯಾನದ ಸುಖವನ್ನು ಅನುಭವಿಸಿದಾಗ ಆ ಗುಹೆಯಲ್ಲಿನ ಆಧ್ಯಾತ್ಮಿಕ ತರಂಗಗಳ ಪರಿಚಯವಾಯಿತು. ನಂತರ ಮಾತಾಜಿಯವರ ಮುಖಾರವಿಂದದಿಂದ ಹೊರಬಿದ್ದ ಆಧ್ಯಾತ್ಮಿಕ ಮುತ್ತುರತ್ನಗಳನ್ನು ಆಯ್ದುಕೊಳ್ಳುವುದರಲ್ಲಿ ಮಗ್ನರಾದೆವು. ಅವರ ಆಧ್ಯಾತ್ಮಿಕ ಅನುಭವಗಳನ್ನು ಕೇಳುವ ತವಕ ವ್ಯಕ್ತಪಡಿಸಿದಾಗ ಮಾತಾಜಿಯವರು, “ನನ್ನ ಆಧ್ಯಾತ್ಮಿಕ ಅನುಭವಗಳನ್ನು ಖಂಡಿತ ಹೇಳುತ್ತೇನೆ ಏಕೆಂದರೆ ಎಲ್ಲರೂ ಕೊಳಕನ್ನೇ ಹಂಚಿಕೊಳ್ಳುತ್ತಾರೆ. ಆಗ ಲೋಕವೆಲ್ಲಾ ಕೊಳಕಿನಿಂದಲೇ ತುಂಬಿಹೋಗುತ್ತದೆ. ಭಗವಂತನ ಅನುಭವಗಳನ್ನು ಹಂಚಿಕೊಳ್ಳುವುದು ತುಂಬಾ ಮುಖ್ಯ. ‘ Then world will be filled by good thoughts’ ಎಂದರು. ಅವರ ಆ ದಿಟ್ಟ ನಿಲುವು, ವಾದಸರಣಿ ನನಗೆ ಆಪ್ಯಾಯಮಾನವೆನಿಸಿತು. ಅವರ ಮಾತುಗಳನ್ನು ಆಲಿಸುತ್ತಾ ಕುಳಿತ ನಮಗೆ ರಾತ್ರಿ ಸಮಯ ಸರಿದಿದ್ದೇ ತಿಳಿಯಲಿಲ್ಲ. ಮರುದಿನ ಪ್ರಾತಃಕಾಲದ ಜಪಾದಿಗಳ ನಂತರ ಮತ್ತೆ ಅವರು ತಮ್ಮ ಆಧ್ಯಾತ್ಮಿಕ ಜೀವನದ ಕೆಲವು ಪುಟಗಳನ್ನು ತಿರುವಿಹಾಕಲು ತೊಡಗಿದರು. ಆಗ ಒಂದು ಹೊಸ ಜಗತ್ತೇ ನಮ್ಮ ಮುಂದೆ ತೆರೆದಿಟ್ಟಂತಾಯಿತು. ಅವರು ತಮ್ಮ ಆಧ್ಯಾತ್ಮಿಕ ಜೀವನದ ಸವಾಲುಗಳನ್ನು, ಅಡ್ಡಿ ಆತಂಕಗಳನ್ನು ಎದುರಿಸಿದ ರೀತಿ, ಯಾರಿಂದಲೂ ಏನನ್ನೂ ಬಯಸದ ಮನೋಭಾವ ಮತ್ತು ಯಾರಿಂದಲೂ ಹಣವನ್ನು ಸ್ವೀಕರಿಸಬಾರದೆಂಬ ದೃಢ ಪ್ರತಿಜ್ಞೆ (ಕೇವಲ ಆವಶ್ಯಕ ಪದಾರ್ಥಗಳ ಭಿಕ್ಷೆ ಮಾತ್ರ ಸ್ವೀಕರಿಸುವರು) ಕೈಗೊಂಡು ಜೀವನ ನಡೆಸುತ್ತಿರುವ ಕ್ರಮವನ್ನು ಕಂಡು ಅವರ ಕುರಿತಾದ ಭಕ್ತಿ ಇಮ್ಮಡಿಯಾಯಿತು. ಸಂತರೊಬ್ಬರೊಡನೆ ಬಾಳುವುದು ಸಾವಿರ ಪುಸ್ತಕಗಳನ್ನು ಓದುವುದಕ್ಕಿಂತ ಲೇಸು ಎಂಬ ನುಡಿಯು ನೆನಪಾಯಿತು.

ಸುತ್ತಮುತ್ತ ದಟ್ಟ ಹಸಿರಿನಿಂದ ಕೂಡಿದ ಗಿಡಮರಗಳು, ಮನುಷ್ಯ ಸಂಚಾರವೇ ಇಲ್ಲದ ಏಕಾಂತ ಸ್ಥಳದಲ್ಲಿನ ಗುಹೆ, ಇಂಟರ್‌ನೆಟ್, ದೂರವಾಣಿಯ ಮಾತಿರಲಿ ವಿದ್ಯುಚ್ಛಕ್ತಿಯೂ ಇಲ್ಲದ ಈ ಪ್ರದೇಶದಲ್ಲಿ, ಕಾಡಿನ ಪ್ರಾಣಿಗಳೂ ಆಗಾಗ ಗುಹೆಗೆ ಭೇಟಿ ನೀಡುತ್ತಿರುತ್ತವೆಯಂತೆ. ಇಂತಹ ಪರಿಸ್ಥಿತಿಯಲ್ಲಿ, ಹನ್ನೆರಡು ವರ್ಷಗಳಿಂದ ಏಕಾಂಗಿಯಾಗಿ, ಸ್ತ್ರೀ ಶರೀರದ ಮಾನ ಕಾಪಾಡಿಕೊಳ್ಳುತ್ತ, ಭಗವಂತನನ್ನು ಕರೆಯುತ್ತಾ, ಗುಹೆಯಲ್ಲಿ ವಾಸಿಸುತ್ತಿರುವ ಜೀವನದ ಪರಿಯನ್ನು ಕಂಡು ಮನಸ್ಸು ನಿಬ್ಬೆರಗಾಯಿತು. ಅವರ ವ್ಯಾಕುಲತೆ, ವೈರಾಗ್ಯಗಳ ಆಳ ಅಗಲಗಳ ಪರಿಚಯವಾಯಿತು. ಸೀಮಿತ ಸಾಧನಗಳಿದ್ದ ಪ್ರತಿಕೂಲ ಪರಿಸ್ಥಿತಿಯಲ್ಲಿ ಅನೇಕ ವರ್ಷಗಳ ಕಾಲ ಅಲ್ಲಿದ್ದು ಸಾಧನೆ ಮಾಡುವುದು ಪರಮಾತ್ಮನ ವಿಶೇಷ ಕೃಪೆಯಿಂದ ಮಾತ್ರ ಸಾಧ್ಯ. ಅಮೆರಿಕಾದ ಶಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ, ನಂತರ ಹನ್ನೆರಡು ವರ್ಷಗಳಲ್ಲಿ ಆ ಪರಮಾತ್ಮನ ಸಾಕ್ಷಾತ್ಕಾರ ಪಡೆದೇ ತೀರುವೆ ಎಂದು ಧೃಡ ಪ್ರತಿಜ್ಞೆ ತೊಟ್ಟು ಹಿಮಾಲಯಕ್ಕೆ ಬಂದ ಧೀರ ಮಹಿಳೆ ಈಕೆ. ಇಪ್ಪತ್ತು ವರ್ಷಗಳಿಂದ ತಪೋವನ, ಕೇದಾರ, ಯಮುನೋತ್ರಿ, ಗಂಗೋತ್ರಿ ಇತ್ಯಾದ ಸ್ಥಳಗಳಲ್ಲಿನ ಗುಹೆಗಳಲ್ಲಿ ಒಬ್ಬಂಟಿಯಾಗಿ ಸಾಧನೆ ಮಾಡುತ್ತಾ, ಜೀವನವು ಒಡ್ಡಿದ ಸಮಸ್ಯೆಗಳನ್ನೆಲ್ಲಾ ದೈವ ಸಹಾಯದಿಂದ ಧೈರ್ಯವಾಗಿ ಎದುರಿಸುತ್ತಾ ಬಂದ, ಭಗವದ್ ನಿರ್ಭರ ಜೀವನಕ್ಕೆ ಕನ್ನಡಿಯಂತಿರುವ ಈ ಮಹಾಸಾಧ್ವಿಯ ಬದುಕು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಅವರೊಂದಿಗೆ ಕಳೆದ ಈ ಎರಡು ದಿನಗಳು ನನ್ನ ಜೀವನದ ಅವಿಸ್ಮರಣೀಯ ಕ್ಷಣಗಳಾಗಿವೆ. ಎರಡು ದಿನಗಳ ನಂತರ ಮನಸ್ಸನ್ನು ಅವರ ಪ್ರಭಾವಲಯದೊಳಗೆ ಸುತ್ತಲು ಬಿಟ್ಟು, ಭಾರವಾದ ಹೆಜ್ಜೆಗಳನಿಡುತ್ತಾ ‘ಧರಾಲಿ’ಗೆ ಹಿಂದಿರುಗಿದೆವು. ಧರಾಲಿಗೆ ಹಿಂದಿರುಗುವ ಮುನ್ನ ಗಂಗೋತ್ರಿಧಾಮದಲ್ಲಿಯೂ ಮೂರು, ನಾಲ್ಕು ಗುಹೆಗಳಲ್ಲಿ ತೀವ್ರಸಾಧನೆಯಲ್ಲಿ ತೊಡಗಿದ್ದ ಸಂನ್ಯಾಸಿಯರನ್ನು ದರ್ಶಿಸಿ, ಆಶೀರ್ವಾದ ಪಡೆದು ಬಂದೆವು. ಗಂಗೋತ್ರಿಯಿಂದ ಇಪ್ಪತ್ತು ಕಿ.ಮಿ. ದೂರದಲ್ಲಿ ‘ಧರಾಲಿ’ಯ ‘ಮುಖವಾ’ ಹಳ್ಳಿಯಲ್ಲಿ ಬೆಟ್ಟದ ಮೇಲೆ ಗಂಗಾಮಾತೆಯ ದೇಗುಲವಿದೆ. ಚಳಿಕಾಲದ ಆರು ತಿಂಗಳು ಗಂಗೋತ್ರಿಯು ಹಿಮದಿಂದ ಆವೃತವಾದಾಗ ಗಂಗಾಮಾತೆಯನ್ನು ಇಲ್ಲಿರಿಸಿ ಪೂಜೆ ಸಲ್ಲಿಸುವರು. ನಾವಿಬ್ಬರೂ ಇಲ್ಲಿ ಗಂಗಾಮಾತೆಯ ದರ್ಶನ ಪಡೆದು, ಪೂಜೆ ಸಲ್ಲಿಸಿ ವಸತಿಗೃಹಕ್ಕೆ ತೆರಳಿದೆವು.

ಇಂತಹ ತಪಸ್ವಿನಿಯ ದರ್ಶನದಿಂದ ನನ್ನ ಜೀವನ ಪುನೀತವಾಯಿತು. ಬೆರಗುಗೊಳಿಸುವ ಹಿಮಾಲಯವು ತನ್ನ ಒಡಲಲ್ಲಿ ಇಂತಹ ಇನ್ನೆಷ್ಟು ಸಾಧುಸಂತರನ್ನು, ತಪಸ್ವಿಗಳನ್ನು ಅಡಗಿಸಿಕೊಂಡಿದೆಯೊ! ಆದ್ದರಿಂದಲೇ ಹಿಮಾಲಯವು ದೇವಭೂಮಿಯಾಗಿ ಭಾರತದ ಪುಣ್ಯಭೂಮಿ ಎನಿಸಿಕೊಂಡಿದೆ. ಹಿಂದೂಧರ್ಮದಲ್ಲಿ ಹಿಮಾಲಯ ಕೇವಲ ಪರ್ವತವಲ್ಲ, ಅದು ಪವಿತ್ರತೆಯ ಸಂಕೇತವೂ ಆಗಿದೆ. ಸಂಸ್ಕೃತದಲ್ಲಿ ಹಿಮಾಲಯ ಎಂದರೆ ಹಿಮದ ಮನೆ ಎಂದರ್ಥ ಹಿಮ+ಆಲಯ. ನಾನು ಮಾಡಿದ ಅಲ್ಪ ಭಕ್ತಿಗೆ ದಿವ್ಯತ್ರಯರು ನನ್ನ ಯೋಗ್ಯತೆ ಮೀರಿ ಅನುಗ್ರಹಿಸಿದರು; ನಾನು ಧನ್ಯಳಾದೆ! ✿

# ಸ್ವಾಮಿ ಧರ್ಮೇಶಾನಂದ (೧೮೯೯-೧೯೯೪)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

## ಭಾಗ ೧

೧೯೮೨ನೆಯ ಇಸವಿಯಲ್ಲಿ ಅಮೆರಿಕದಿಂದ ಭಾರತಕ್ಕೆ ಬಂದಿದ್ದ ನಾನು ಕೆಲವು ದಿನಗಳು ಕಾಶಿಯಲ್ಲಿದ್ದೆ. ಆಗ ಕೆಲವು ಹಿರಿಯ ಸಾಧುಗಳ ಸಂದರ್ಶನ ಮಾಡಿ ಅವರ ಸ್ಮೃತಿಕಥೆಗಳನ್ನು ಕ್ಯಾಸೆಟ್‌ನಲ್ಲಿ ಟೇಪ್ ಮಾಡಿಕೊಂಡಿದ್ದು ಅವುಗಳಿಂದ ಈ ಅಮೂಲ್ಯ ಸ್ಮೃತಿಕಥೆಗಳನ್ನು ಬರೆದಿರುವೆ.

೧೯.೦೮.೧೯೮೨ರಂದು ಕಾಶಿಯ ಅದ್ವೈತ ಆಶ್ರಮದಲ್ಲಿ ಸ್ವಾಮಿ ಧರ್ಮೇಶಾನಂದರನ್ನು (ಧೀರೇನ್ ಮಹಾರಾಜ್) ಪ್ರಶ್ನಿಸಿ ಅವರ ನೆನಪುಗಳನ್ನು ಟೇಪ್ ಮಾಡಿಕೊಂಡೆ. ಶ್ರೀ ಮಹೇಂದ್ರನಾಥ ಗುಪ್ತರ (ಶ್ರೀ 'ಮ') ಆತ್ಮೀಯ ಸಾನ್ನಿಧ್ಯಕ್ಕೆ ಬಂದಿದ್ದ ಅವರು ಠಾಕೂರರ ಇತರ ಶಿಷ್ಯರ ಸಂಗಲಾಭವನ್ನು ಪಡೆದಿದ್ದರು. ಹಳೆಯ 'ಉದ್ಬೋಧನ' ಸಂಚಿಕೆಯೊಂದರಲ್ಲಿದ್ದ ಅವರ 'ಶ್ರೀ ಮ-ಸಾನ್ನಿಧ್ಯೇ' ಎಂಬ ಲೇಖನವನ್ನು ಓದಿದ್ದೆ. ಆದ್ದರಿಂದ ನಾನು ಶ್ರೀ 'ಮ' ಅವರ ಸಂಬಂಧವಾಗಿ ಮಾತನಾಡಬೇಕೆಂದು ಅವರನ್ನು ಕೋರಿದೆ. ಅವರ ಸ್ಮೃತಿಯಿದು:

### ಶ್ರೀ 'ಮ' – ಅವರ ಸ್ಮೃತಿ

೧೯೨೧-೧೯೨೨ರಲ್ಲಿ ನಾನು ಶ್ರೀ ಮ – ಅವರ ಜೊತೆಯಲ್ಲಿದ್ದೆ. ಅವರು ಆ್ಯಮ್‌ಹರ್ಸ್ಟ್ ಸ್ಟ್ರೀಟಿನ ಮರ್ಟನ್ ಇನ್‌ಸ್ಟಿಟ್ಯೂಟಿನ ನಾಲ್ಕನೆ ಮಹಡಿಯಲ್ಲಿದ್ದರು. ಇದಕ್ಕೆ ಮುಂಚೆ ನಾನು ಸುರೇನ್ ಬಾಬುವಿನಿಂದ 'ಶ್ರೀರಾಮಕೃಷ್ಣ ಕಥಾಮೃತ'ದ ನಾಲ್ಕನೇ ಭಾಗವನ್ನು ಪಡೆದು ಓದಿ ಆನಂದಿಸಿದ್ದೆ. ಅವರು ನನಗೆ, 'ಈ ಗ್ರಂಥದ ಲೇಖಕರು ಈಗಲೂ ಇದ್ದಾರೆ' ಎಂದರು. ಒಂದು ಸಂಜೆ ನಾವಿಬ್ಬರೂ ಶ್ರೀ 'ಮ' ಅವರ ಬಳಿಗೆ ಹೋದಾಗ ಅವರು ಕುರ್ಚಿಯಲ್ಲಿ ಕುಳಿತಿದ್ದರು. ನಾವು ಬೆಂಚಿನ ಮೇಲೆ ಕುಳಿತೆವು. ಆಷಾಢ ಮಾಸ; ಕೆಲವು ದಿನಗಳ ಹಿಂದೆಯಷ್ಟೆ ರಥಯಾತ್ರೆ ಮುಗಿದಿತ್ತು. ಶ್ರೀ 'ಮ' ಜಗನ್ನಾಥ ದೇವರ ಮಹಾಪ್ರಸಾದದ ಮಹಿಮೆಯನ್ನು ಹೇಳತೊಡಗಿದರು. ಈ ಪ್ರಸಾದವನ್ನು ಶ್ರೀ ಠಾಕೂರರು ಗ್ರಹಣ ಮಾಡುತ್ತಿದ್ದರು. ಶ್ರೀ ಮ- ಅವರೂ ಪ್ರತಿದಿನ ಅದನ್ನು ಗ್ರಹಣಮಾಡುತ್ತಾರೆ. ಅವರು ನಮ್ಮೆಲ್ಲರ ಕೈಗೂ ಆ ಪ್ರಸಾದವನ್ನು (ಒಣಗಿದ ಅನ್ನ) ಕೊಡುತ್ತ ಹೇಳಿದರು, ''ಈ ಪ್ರಸಾದವನ್ನು ಗ್ರಹಿಸಿದರೆ ಭಕ್ತಿಯುಂಟಾಗುತ್ತದೆ.'' ಆಗ ಕಾಲೇಜು ವಿದ್ಯಾರ್ಥಿಯಾಗಿದ್ದ ನಾನು ಬ್ರಹ್ಮ ಸಮಾಜಕ್ಕೆ ಹೋಗುತ್ತಿದ್ದೆ. ವಿಚಾರ ಮಾಡದೆ ಯಾವುದನ್ನೂ ಒಪ್ಪುತ್ತಿರಲಿಲ್ಲ. ಪ್ರಸಾದದ ಬಗ್ಗೆಯೂ ನನಗೆ ಯಾವ ವಿಶ್ವಾಸವೂ ಇರಲಿಲ್ಲ. ಶ್ರೀ ಮ-ಗೆ ನಾನೆಂದೆ, ''ಹೌದು, ವಿಶ್ವಾಸದಿಂದ ಗ್ರಹಿಸಿದರೆ ಆಗ ಮಾತ್ರವೇ ಭಕ್ತಿಯುಂಟಾಗಬಹುದು.'' 'ಈ ಪ್ರಸಾದವನ್ನು ತಿಂದರೆ ಭಕ್ತಿ ಉಂಟಾಗುತ್ತದೆ,' ಎಂಬುದು ಠಾಕೂರರ ಮಾತುಗಳು ಎಂದವರು ಹೇಳಿದಾಗ ನಾನು ಮರು ಪ್ರಶ್ನಿಸಿದೆ ''ಅದು ಹೇಗೆ ತಾನೆ ಸಾಧ್ಯ ?'' ನನ್ನ ತರ್ಕವನ್ನು ಕೇಳಿದ ಅವರು ಹೇಳಿದರು, ''ವಿಷವನ್ನು ನೀನು ತಿಳಿಯದೆ ತಿಂದರೂ ಮರಣ ಹೊಂದುವುದು ಖಂಡಿತ. ನೋಡಪ್ಪ, ಎಲ್ಲ ವಸ್ತುಗಳಲ್ಲೂ ಅವುಗಳದೇ ಆದ ಪ್ರತ್ಯೇಕ ಗುಣಗಳಿವೆ.''

ಬಳಿಕ ಅವರು ಬೇರೆಡೆ ನೋಡುತ್ತ ಇತರ ಭಕ್ತರನ್ನುದ್ದೇಶಿಸಿ, ''ನೋಡಿ, ಈ ಮಹಾಶಯರಿಗೆ ಠಾಕೂರರ ಮಾತುಗಳಲ್ಲಿ ನಂಬಿಕೆಯಿಲ್ಲ'' ಎಂದರು. ಎಲ್ಲರೂ ಮೌನವಾಗಿದ್ದರು. ಸುರೇನ್ ಬಾಬು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದಾರೆ. ನಾನು ಮನಸ್ಸಿಲ್ಲದ ಮನಸ್ಸಿನಿಂದ ಪ್ರಸಾದದ ಕಣವನ್ನು ಸ್ವೀಕರಿಸಿದೆ. ಈ ಘಟನೆಯ ನಂತರ ನಾನು ಆಗಾಗ ಶ್ರೀ ಮ-ರ ಬಳಿ ಹೋಗುತ್ತಿದ್ದೆ.

೧೯೨೧ರಲ್ಲಿ ಬೇಲೂರು ಮಠದಲ್ಲಿ ಸ್ವಾಮಿ ಬ್ರಹ್ಮಾನಂದರ ದರ್ಶನವನ್ನು ಮಾಡಿದ್ದೆ. ೧೯೨೪ರಿಂದ ಕಲ್ಕತ್ತದ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿದ್ದಾಗ ವಿವೇಕಾನಂದ ಸೊಸೈಟಿಯಲ್ಲಿದ್ದೆ. ಆಗ ಅಲ್ಲಿನ ಬ್ರಹ್ಮಚಾರಿ ತಾರಕನ ಜತೆಯಲ್ಲಿ ನಾನು ಪುನಃ ಶ್ರೀ ಮ- ಅವರ ಬಳಿ ಹೋದೆ. ನಮ್ಮನ್ನು ಕಂಡಾಗ ಶ್ರೀ ಮ ತಾರಕನನ್ನು ಕೇಳಿದರು, ''ನೀನೇನು ಮಾಡುತ್ತಿರುವೆ?'' ಅವನೆಂದ, ''ನಾನು ಸೊಸೈಟಿಯ ಚಂದಾ ಸಂಗ್ರಹ ಮಾಡುತ್ತೇನೆ. ಅಲ್ಲಿ ಸಾಧುಗಳು ವಾರಕ್ಕೆರಡು ಕ್ಲಾಸ್ ತೆಗೆದುಕೊಳ್ಳುತ್ತಾರೆ. ಅಲ್ಲಿ ನಡೆಯುವ ಭಜನೆ-ರಾಮಸಂಕೀರ್ತನೆಗಳಿಗೆ ಬೇಕಾಗುವ ವ್ಯವಸ್ಥೆಯನ್ನು ಮಾಡುತ್ತೇನೆ.'' ಬಳಿಕ ಅವರು ನನ್ನನ್ನು ಕೇಳಿದರು, ''ನೀನೇನು ಮಾಡುತ್ತೀ ?'' ''ನಾನು ಬೆಳಗ್ಗೆ ಪೂಜೆಯನ್ನು ಹಾಗೂ ಸಂಜೆ ಆರತಿಯನ್ನೂ ಮಾಡುತ್ತೇನೆ, ಹಾಗೂ ಎರಡು ಗಂಟೆ ಲೈಬ್ರರಿಯಲ್ಲಿ ಕೆಲಸ ಮಾಡುತ್ತೇನೆ'' ಎಂದೆ.

ಇದನ್ನು ಕೇಳಿದ ಶ್ರೀ 'ಮ' ಹೇಳಿದರು, ''ವಾಹ್, ನಿನ್ನ ಕೆಲಸ ಉತ್ತಮವಾದುದು! ನೀನು ಪೂಜೆಗಾಗಿ ಶ್ರೀಗಂಧವನ್ನು ತೇದು ಠಾಕೂರರನ್ನು ಪುಷ್ಪಗಳಿಂದ ಅಲಂಕರಿಸುತ್ತೀಯ. ಪವಿತ್ರತಮರಾದ ಠಾಕೂರರ ಪೂಜೆಯನ್ನು ಮಾಡಿ ಅವರಿಗೆ ನೈವೇದ್ಯವನ್ನು ಮಾಡುತ್ತೀಯ. ನಿನ್ನ ಈ ಕೆಲಸ ಬಹಳ ಚೆನ್ನಾಗಿದೆ. ಇದನ್ನೆಂದೂ ಬಿಡಬೇಡ. ಪೂಜೆ ಮಾಡುತ್ತ ಭಗವಂತನ ಕೃಪೆಯನ್ನು ಬೇಗನೆ ಪಡೆಯಬಹುದು,'' ಎನ್ನುತ್ತ ನನ್ನನ್ನು ಬಹಳ ಪ್ರೋತ್ಸಾಹಿಸಿದರು.